# ಮಹಿಪತಿದಾಸರ ಕೀರ್ತನೆ

ಕೋಲು ಕೋಲೆನ್ನ ಕೋಲೆ । ಕೋಲು ಕೋಲೆನ್ನ ಕೋಲೆ ।
ಕೋಲುಶ್ರೀ ಗುರುವಿನ ಬಲಗೊಂಬೆ ಕೋಲೆ ॥

ಶಿಕ್ಷಿಸಿ ನಿಗಮಚೋರ ರಾಕ್ಷಸರಾ ಕೊಂದು ರಿಕ್ಷಿಸಿ ವೇದವನುಳಿಹಿದ ಕೋಲೆ ।
ರಕ್ಷಿಸಿ ವೇದವನುಳುಹಿದ ಕ್ಷಿತಿಯೊಳು ಮತ್ಸ್ಯಾವತಾರನ ಬಲಗೊಂಬೆ ಕೋಲೆ ।೧॥

ಧರ್ಮ ನಡೆಯಲಾಗಿ ಮರ್ಮವಾ ತಾಳಿದ ಕರ್ಮಹಾರ ಶ್ರೀಮೂರ್ತಿಯ ಕೋಲೆ ।
ಕರ್ಮಹಾರಶ್ರೀ ಮೂರ್ತಿಯ ಧರೆಯ ಹೊತ್ತ ಕೂರ್ಮಾವತಾರನ ಬಲಗೊಂಬೆ ಕೋಲೆ ॥ ೨ ॥

ಧರೆಯ ಕದ್ದಸುರನ ಕೋಲೆದಾಡಿಂದ ಸೀಳಿ ಹೋರಿ ಹೊಯ್ದಾಡಿದ ನರಹರಿ ಕೋಲೆ ।
ಹೋರಿ ಹೊಯ್ದಾಡಿದ ನರಹರಿ ಧರೆಯಗೆದ್ದ ವರಹಾವತಾರನ ಬಲಗೊಂಬೆ ಕೋಲೆ ॥ ೩ ॥

ತರುಳ ಪ್ರಹ್ಲಾದನಾಗಿ ಧುರುಳ ಧೈತ್ಯರ ಕೊಂದು ಕರುಳನ ಮಾಲೆಯ ಧರಿಸಿದ ಕೋಲೆ ।
ಕರುಳನ ಮಾಲೆಯ ಧರಿಸಿದ ಹರಿ ನರಸಿಂಹಾವತಾರನ ಬಲಗೊಂಬೆ ಕೋಲೆ ॥ ೪ ॥

ನೇಮಿಸಿ ಮೂರುಪಾದ ಭೂಮಿಯ ಬೇಡಿದ ಹೆಮ್ಮೆಯಂ ಪರಿಹರಿಸಿದ ಕೋಲೆ ।
ಹೆಮ್ಮೆಯ ಪರಿಹರಿಸಿದ ಬ್ರಾಹ್ಮಣನಾಗಿ ವಾಮನಾವತಾರನ ಬಲಗೊಂಬೆ ಕೋಲೆ ॥ ೫ ॥

– ೨ –

ಆಜ್ಞೆಯ ಮೀರದೆ ಅತ್ರಜಳಾ ಶಿರವ ಶೀಘ್ರದಿಂದಲಿ ಇಳುಹಿದ ಕೋಲೆ ।
ಶೀಘ್ರದಿಂದಲಿ ಇಳುಹಿದ ಶಿರವನ್ನು ಭಾರ್ಗವರಾಮನ ಬಲಗೊಂಬೆ ಕೋಲೆ ॥ ೬ ॥

ಕಾಮದಿಂದೊಯ್ದ ಸೀತೆಯ ತಾಮಸದನವಾ ಕೊಂದ ನೇಮವ ಸ್ಥಾಪಿಸಿದ ಇಳೆಯೊಳು ಕೋಲೆ ।
ನೇಮವ ಸ್ಥಾಪಿಸಿದ ಇಳೆಯೊಳು ಶ್ಯಾಮವರ್ಣ ರಾಮನವತಾರನ ಬಲಗೊಂಬೆ ಕೋಲೆ ॥ ೬ ॥

ದುಷ್ಟ ದೈತ್ಯರನ್ನೆಲ್ಲ ಕುಟ್ಟಿ ಮಡುನೆಟ್ಟಾನೆ ಗಿರಿಯಾನೆತ್ತಿದಾ ಕೋಲೆ ।
ನೆಟ್ಟಾನೆ ಗಿರಿಯಾನೆತ್ತಿದ ಬೆಟ್ಟಲ್ಲಿ ಕೃಷ್ಣಾವತಾರನ ಬಲಗೊಂಬೆ ಕೋಲೆ ॥ ೭ ॥

ಕದ್ದು ತ್ರಿಪುರನ ಕೊಂದು ಇದ್ದಸತಿಯರ ವ್ರತವ ಸಿದ್ಧಿಯ ತಾನು ಅಳಿದನು ಕೋಲೆ।
ಸಿದ್ಧಿಯ ತಾನು ಅಳಿದನು ಬುದ್ದಿಯಲಿ ಬೌದ್ಧಾವತಾರನ ಬಲಗೊಂಬೆ ಕೋಲೆ॥೮ ॥

ಮಲ್ಲಮಾನ್ಯರನೆಲ್ಲ ಹಲ್ಲಾ ಮುರಿಯಲಾಗಿ ನಲ್ಲ ತೇಜಿಯನೇರಿದ ಕೋಲೆ ।
ನಲ್ಲ ತೇಜಿಯನೇರಿ ದಾರ್ಬಹ್ಯನಾಗಿ ಕಲ್ಕ್ಯಾವತಾರನ ಬಲಗೊಂಬೆ ಕೋಲೆ ॥ ೯ ॥

ವಸ್ತುಪರಾತಪರರ ವಿಸ್ತಾರ ದೂರಲಾಗಿ ಹತ್ತಾವತಾರ ಧರಿಸಿದ ಕೋಲೆ ।
ಹತ್ತಾವತಾರ ಧರಿಸಿದ ಮಹಿಪತಿ ಅಂತರಾತ್ಮನ ಬಲಗೊಂಬೆ ಕೋಲೆ ॥ ೧೦ ॥

(ಮಹಿಪತಿದಾಸರ ಕೀರ್ತನೆ)

ಸಂಗ್ರಹ – ಆರ್. ನರಹರಿ,